ಸಹಕಾರ ಸಂಘಗಳಲ್ಲಿ ಮೀಸಲಾತಿ.

4195(4516) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ತಾಲ್ಲೂಕಿನಲ್ಲಿರುವ ಪ್ರಾಥಮಿಕ ಸಹಕಾರಿ ಸಂಘಗಳಲ್ಲಿ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ನಿರ್ದೇಶಕರ ಮಂಡಳಿಯಲ್ಲಿ ಮೀಸಲಾತಿ ಕಲ್ಪಿಸಲಾಗಿದೆಯೇ?

ಆ) ಹಾಗಿದ್ದಲ್ಲಿ ಪ್ರತಿಯೊಂದು ಸಹಕಾರ ಸಂಘಗಳಲ್ಲಿ ಮೀಸಲಾತಿಯಂತೆ ನಿರ್ದೇಶಕರ ಸ್ಥಾನ ತುಂಬಲಾಗಿದೆಯೇ?

ಶ್ರೀ ಡಿ.ಕೆ. ಶಿವಕುಮಾರ (ಸಹಕಾರ ಸಚಿವರು) :—

ಅ) ಹೌದು. ಒಂದು ಸ್ಥಾನವನ್ನು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗದವರಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ, 1959ರ ಕಲಂ 28(ಎ) (3)(ಬಿ) ರನ್ವಯ ಮೀಸಲಾಗಿಡಲಾಗಿದೆ.

ಆ) ಪರಿಶಿಷ್ಟ ಜಾತಿ ವರ್ಗದವರು ಸದಸ್ಯರಾಗಿ ಇಲ್ಲದಿರುವ ಪ್ರಾಥಮಿಕ ಸಹಕಾರ ಸಂಘಗಳನ್ನು ಹೊರತು ಪಡಿಸಿ, ಉಳಿದೆಲ್ಲಾ ಪ್ರಾಥಮಿಕ ಸಂಘಗಳಲ್ಲಿ ಪರಿಶಿಷ್ಟ ಜಾತಿ ವರ್ಗದವರಿಗೆ ಮೀಸಲಾತಿಯಂತೆ ಸ್ಥಾನಗಳನ್ನು ತುಂಬಲು ಕ್ರಮವಿಡಲಾಗುತ್ತಿದೆ.

ತೆಂಗಿನ ಕಾಯಿಗಳಿಗೆ ಬೆಂಬಲದ ಬೆಲೆಯನ್ನು ಕೊಡುವ ವಿಚಾರ.

4196(4515) ಶ್ರೀ ಕರಿಯಣ್ಣ (ಹೊಳೆಹೊನ್ನೂರು) :— ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಇರುವ ತೆಂಗಿನ ಮರದ ಜಮೀನಿನ ವಿಸ್ತೀರ್ಣ ಎಷ್ಟು ;

ಆ) 1997-98 ಮತ್ತು 1998-99ನೇ ಸಾಲುಗಳಲ್ಲಿ ಇದ್ದ 1000 ತೆಂಗಿನ ಕಾಯಿಯ ಬೆಲೆ ಎಷ್ಟು?

ಇ) ಈ 2000-2001ನೇ ಸಾಲಿನಲ್ಲಿ 1000 ತೆಂಗಿನಕಾಯಿಯ ಬೆಲೆಯೆಷ್ಟು ಇದೆ?